ಅನುಭವದಂತೆ ವಿವರಿಸುವುದು ಸಾಮಾನ್ಯ. ಆದರೆ ರಶ್ದಿಗೆ ಹಾಗೇನೂ ಅನ್ನಿಸುವುದಿಲ್ಲ. ಜೀವ ಹೋಗುತ್ತಿರುವ ಸಂದರ್ಭದಲ್ಲಿ ಯಾವ ದರ್ಶನವೂ ಕಾಣುವುದಿಲ್ಲ. ಬೆಳಕಿನ ಕಿರಣವೂ ಇಲ್ಲ, ಅಲೌಕಿಕ ಅನುಭವವೂ ಇಲ್ಲ. 'ನಾನು ಸಾಯುತ್ತಿದ್ದೇನೆ ಅನ್ನಿಸಿತು. ಅಷ್ಟೇ' ಎನ್ನುವ ಅವರ ಮಾತಿನಲ್ಲಿ ಯಾವ ಭಾವತೀವ್ರತೆಯೂ ಕಾಣುವುದಿಲ್ಲ. ಈ ನೋವಿನ ನಡುವೆಯೂ ರಶ್ದಿಯ ಮನಸ್ಸಿಗೆ ಬರುವುದು ಜೇಬಿನಲ್ಲಿರುವ ಪರ್ಸು, ಕ್ರೆಡಿಟ್ ಕಾರ್ಡುಗಳು, ಮತ್ತೊಂದು ಜೇಬಿನಲ್ಲಿರುವ ಮನೆಯ ಬೀಗದ ಕೈ. ದೇವರ ಅಸ್ತಿತ್ವದ ಬಗ್ಗೆ ಸ್ಪಷ್ಟ ನಿಲುವಿಲ್ಲದ. ಧಾರ್ಮಿಕ ನಂಬಿಕೆಗಳಿಲ್ಲದವರು ಸಾವನ್ನು ಎದುರಿಸಬಹುದಾದ ಪರಿ ಇದೇ ಏನೋ. ವ್ಯಾವಹಾರಿಕವಾಗಿ – ಮಾಡಿರುವ, ಮಾಡಬೇಕಿರುವ ಕೆಲಸಗಳು ಮತ್ತು ಸುತ್ತಮುತ್ತಲಿನ ಸಂಬಂಧಗಳ ಬಗ್ಗೆ ಟಿಪ್ಪಣಿಗಳನ್ನು ಮಾಡುತ್ತಾ ಆ ಕ್ಷಣದ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳುತ್ತಾ ಇದ್ದುಬಿಡುವುದು.

ರಶ್ದಿಯವರ ಜೀವನ ಯಾವ ಶತ್ರುವಿಗೂ ಬರದಿರಲಿ. ರಶ್ದಿ ಹುಟ್ಟಿದ್ದು 1947ರಲ್ಲಿ. ಭಾರತಕ್ಕೆ ಸ್ವಾತಂತ್ರ್ಯ ಬರುವ ಕೆಲವು ತಿಂಗಳುಗಳ ಮುನ್ನ. ಅವರ ಎರಡನೇ ಮತ್ತು ಅತ್ಯಂತ ಯಶಸ್ವಿ ಕಾದಂಬರಿಯ ನಾಯಕ ಸಲೀಮ್ ಸಿನಾಯ್ ಹುಟ್ಟುವುದು ದೇಶಕ್ಕೆ ಸ್ವಾತಂತ್ರ್ಯ ಬಂದ ಅದೇ ಗಳಿಗೆಯಲ್ಲಿ. ಒಂದು ದೇಶದ ಚರಿತ್ರೆಯೂ, ಒಬ್ಬ ವ್ಯಕ್ತಿಯ ಬೆಳವಣಿಗೆಯೂ ಹೇಗೆ ಬೆಸೆದು ನಿಂತಿವೆ ಎಂದು ಪರೀಕ್ಷಿಸಿ ನೋಡುವ 'ಮಿಡ್‌ನೈಟ್ಸ್ ಚಿಲ್ಡ್ರನ್' ಒಂದು ಅದ್ಭುತ ಕಾದಂಬರಿ. ತಮ್ಮ ಕಥನದಲ್ಲಿ ಒಂದು ರೀತಿಯ ಮಾಂತ್ರಿಕತೆಯನ್ನು ರಶ್ದಿ ತರುತ್ತಾರೆ. ಆ ಮಾಂತ್ರಿಕತೆಯನ್ನು ಕಥನದಲ್ಲೂ – ಕಥನ ಶೈಲಿಯ ಗದ್ಯಬರಹದಲ್ಲೂ ಅಳವಡಿಸಿಕೊಳ್ಳುತ್ತಾರೆ.

'ಮಿಡ್‌ನೈಟ್ಸ್ ಚಿಲ್ಡ್ರನ್' ಪ್ರಕಟವಾದದ್ದು 1981ರಲ್ಲಿ. ಏಳು ವರ್ಷಗಳ ನಂತರ ಬಂದ ಅವರ ಐದನೆಯ ಪುಸ್ತಕ 'ಸಟಾನಿಕ್ ವರ್ಸಸ್' ವಿವಾದಕ್ಕೊಳಗಾಯಿತು. ಅದನ್ನು ಭಾರತ ಸರ್ಕಾರ ನಿಷೇಧಿಸಿತು. (ಆ ನಿಷೇಧ ಇನ್ನೂ ಜಾರಿಯಲ್ಲಿದೆ). ಆ ಪುಸ್ತಕವನ್ನು ಓದದೆಯೇ ಇರಾನಿನ ಅಯೋತುಲ್ಲಾ ಖೊಮೇನಿ, ರಶ್ದಿಯನ್ನು ಧರ್ಮಭ್ರಷ್ಟನೆಂದು ಘೋಷಿಸಿ, ಮರಣದಂಡನೆಯ ಫತ್ವಾ ಜಾರಿ ಮಾಡಿದ. ಅಲ್ಲಿಂದ ಮುಂದೆ ರಶ್ದಿಯ ಸಹಜ–ಸಾಮಾನ್ಯ ಜೀವನಕ್ಕೆ ಧಕ್ಕೆಯಾಯಿತು. ಅಂದರೆ,




ಜೀವಭಯ ಮತ್ತು ಜೀವಕ್ಕೆ ಅಪಾಯವಿರುವುದರಿಂದ ರಶ್ದಿಯ ಜೀವನ, ಒಂದು ವಿಚಿತ್ರ ವಾಸ್ತವ ಮತ್ತು ಆತನ ಜೀವನ ಒಬ್ಬ ಕೈದಿಯ ಜೀವನವಾಯಿತು. ಎಲ್ಲಿ ಹೋದರೂ ರಕ್ಷಣೆಯೊಂದಿಗೆ ಹೋಗಬೇಕಾದ, ಅನೇಕ ವರ್ಷಗಳ ಕಾಲ ಬೇರೊಂದೇ ಅಸ್ತಿತ್ವವನ್ನು ತನ್ನದಾಗಿಸಿಕೊಂಡು ಇರಬೇಕಾದ ಛದ್ಮ ವೇಷಧಾರಿ ಜೀವನವನ್ನು ಕಳೆಯಬೇಕಾಗಿ ಬರುವುದು ಸಾಮಾನ್ಯವಲ್ಲ.

1988ರಲ್ಲಿ ಜಾರಿಯಾದ ಫತ್ವಾದ ನಂತರ ಬರೆದ ಮೊದಲ ಪುಸ್ತಕ– ಮಕ್ಕಳ ಕಥಾಗುಚ್ಛ– 'ಹರೂನ್ ಅಂಡ್ ದ ಸೀ ಆಫ್ ಸ್ಟೋರೀಸ್.' ಇದು ರಶ್ದಿ ಬರೆದ ಏಕೈಕ ಮಕ್ಕಳ ಕೃತಿ. ಒಂದೆಡೆ ಮರಣಮುಖಿಯಾಗಿ ಲೇಖಕ ನಿಂತಿದ್ದಾನೆ. ಯಾವ ಕ್ಷಣದಲ್ಲಿ ಯಾರಿಂದ ಹೇಗೆ ಹತ್ಯೆಯ ಪ್ರಯತ್ನ ನಡೆಯಬಹುದೆನ್ನುವುದು ಗೊತ್ತಿಲ್ಲ. ಎಚ್ಚರದಿಂದಿರಬೇಕು. ಅದೇ ಸಮಯಕ್ಕೆ ಸೃಜನಶೀಲ ಬರಹಗಾರನಾಗಿ ತನ್ನ ಮೂಲಧರ್ಮವನ್ನು ಪಾಲಿಸುತ್ತಾ ಬರವಣಿಗೆಯನ್ನು ಮುಂದುವರಿಸಬೇಕು.